**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ನೃಪತುಂಗ ರಸ್ತೆ ಬೆಂಗಳೂರು–01**

**ಸಂಖ್ಯೆ: ಸಿ5(9) ತಂತ್ರಾಂಶ ತರಬೇತಿ 01/2015–16** **ದಿನಾಂಕ: 05–12–2015**

**ಜ್ಞಾಪನ**

ವಿಷಯ:– ಸಚಿವಾಲಯ ವಾಹಿನಿ(Letter Monitoring System and File Monitoring System)ನಲ್ಲಿ ಪತ್ರ ಮತ್ತು ಕಡತ ವಿಲೇವಾರಿಯನ್ನು ನಿರ್ವಹಿಸಲು ಕ್ರಮ ಕೈಗೊಳ್ಳುವ ಬಗ್ಗೆ.

@@@ @@@ @@@

ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು ಮತ್ತು ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಈ ಕೆಳಕಂಡ ಅಂಶಗಳ ಕುರಿತು ತುರ್ತುಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

1. ಉಪನಿರ್ದೇಶಕರ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಯಕ್ರಮ ಅಧಿಕಾರಿಗಳು ಹಾಗೂ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿ.ಆರ್.ಸಿ.(Block Resource Co-ordinator) ಮತ್ತು ಸಿ.ಆರ್.ಪಿ(Cluster Resource Person)ಗಳಿಗೆ ಸಚಿವಾಲಯ ವಾಹಿನಿಯ ಕುರಿತು ಮಾರ್ಗದರ್ಶನವನ್ನು ನೀಡಿ ಪತ್ರಗಳ ಮತ್ತು ಕಡತ ವಿಲೇವಾರಿಯನ್ನು ಮಾಡಬೇಕು.

2. ಸಚಿವಾಲಯ ವಾಹಿನಿಯ ಮುಖಾಂತರ ಕೆಲಸ ನಿರ್ವಹಿಸಲು ಕಛೇರಿಯ ಸಿಬ್ಬಂದಿಗೆ ತರಬೇತಿ ಹಾಗೂ ಮಾರ್ಗದರ್ಶನ ನೀಡಲು ತುರ್ತುಕ್ರಮ ತೆಗೆದುಕೊಳ್ಳಬೇಕು.

3. ಈ ಕೆಳಕಾಣಿಸಿರುವ ತಂತ್ರಾಂಶಗಳನ್ನು ತಮ್ಮ ಕಛೇರಿಯ ಹಂತದಲ್ಲಿಯೇ ನಿರ್ವಹಿಸಬೇಕು. ಇದಕ್ಕೆ ಸಂಬಂಧಿಸಿದ ತರಬೇತಿಯನ್ನು ಜಿಲ್ಲಾ ನೋಡಲ್ ಅಧಿಕಾರಿಗಳು ಹಾಗೂ ಜಿಲ್ಲಾ ಪ್ರೋಗ್ರಾಮರ್‌ಗಳಿಗೆ ಸದ್ಯದಲ್ಲಿಯೇ ನೀಡಲಾಗುತ್ತದೆ.
   - ಸಚಿವಾಲಯವಾಹಿನಿ – ಪತ್ರ ಮತ್ತು ಕಡತ ನಿರ್ವಹಣಾ ತಂತ್ರಾಂಶ ( Letter Monitoring System – LMS and File Monitoring System – FMS).
   - ಹೆಚ್.ಆರ್.ಎಂ.ಎಸ್ (Human Resource Management System) ತಂತ್ರಾಂಶ.
   - ಆರ್.ಟಿ.ಇ. (Right to Education) ತಂತ್ರಾಂಶ.
   - ಸಕಾಲ ತಂತ್ರಾಂಶ.
   - ಸನ್ಮಾನ್ಯ ಮುಖ್ಯಮಂತ್ರಿಗಳವರ ಜನತಾದರ್ಶನದಲ್ಲಿ ಸ್ವೀಕರಿಸಿದ ಅರ್ಜಿಗಳ ವಿಲೇವಾರಿ ಮತ್ತು ನಿರ್ವಹಣಾ ತಂತ್ರಾಂಶ.
   - ಇ–ಸ್ಪಂದನ.
   - ಹೊಸಶಾಲೆ ಪ್ರಾರಂಭಿಸಲು ಸಿದ್ಧಪಡಿಸಿರುವ ತಂತ್ರಾಂಶ.

4. ಉಪನಿರ್ದೇಶಕರ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪತ್ರಾಂಕಿತ ಸಹಾಯಕರು ಹಾಗೂ ಜಿಲ್ಲಾ ಪ್ರೋಗ್ರಾಮರುಗಳು ಸಚಿವಾಲಯ ವಾಹಿನಿ(Letter Monitoring System and File Monitoring System) ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಪತ್ರಾಂಕಿತ ವ್ಯವಸ್ಥಾಪಕರಿಗೆ ಹಾಗೂ ಅವರ ಸಿಬ್ಬಂದಿಗಳಿಗೆ ತರಬೇತಿ ನೀಡಬೇಕು.

----2

5. ಬಾಕಿ ಇರುವ ಕಡತಗಳು, ಮುಕ್ತಾಯಗೊಳಿಸಿದ ಕಡತಗಳು ಮತ್ತು ಕಾಲ್ ರಿಜಿಸ್ಟರ್‌ನಲ್ಲಿ ಇರಿಸಿದ ಕಡತಗಳು ಈ ರೀತಿ ಕಡತಗಳನ್ನು ವಿಂಗಡಿಸಬೇಕು.

6. ಕಡತಗಳನ್ನು ಪಟ್ಟಿ ಮಾಡಿ ಸಚಿವಾಲಯ ವಾಹಿನಿಯಲ್ಲಿ ಕಡತ ನಿರ್ವಹಣೆ (File Monitoring System) ಮತ್ತು ಪತ್ರ ನಿರ್ವಹಣೆಯ (Letter Monitoring System) ಬಗ್ಗೆ ಕ್ರಮ ಕೈಗೊಂಡು ದಿನಂಪ್ರತಿ ಅಂಕಿ–ಅಂಶಗಳ ಮಾಹಿತಿಯನ್ನು ಪ್ರತಿದಿನ ಸಂಜೆ 5.30ರ ಒಳಗೆ ಈ ಕಛೇರಿಗೆ ಇ–ಮೇಲ್ ಮುಖಾಂತರ ಕಡ್ಡಾಯವಾಗಿ ಸಲ್ಲಿಸಬೇಕು.

5/12/15.

[ಕೆ. ಎಸ್. ಸತ್ಯಮೂರ್ತಿ]
ಆಯುಕ್ತರು

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು ಮತ್ತು ಎಲ್ಲಾ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
2. ರಾಜ್ಯದ ಎಲ್ಲಾ ಡಯಟ್ ಹಾಗೂ ಸಿ.ಟಿ.ಇ. ಪ್ರಾಂಶುಪಾಲರಿಗೆ.